**<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ ನ್ಯಾಯಾಲಯ.</u>**

**<u>ರಟ್ಟೀಹಳ್ಳಿ.</u>**

**<u>ಸಿ.ಸಿ.ನಂಬರ್ಃ 117/2018</u>**

ಸಿಡಬ್ಲ್ಯೂಃ 23

ಪಿಡಬ್ಲ್ಯೂಃ13

| | | |
|---|---|---|
| ಸಾಕ್ಷಿಯ ಹೆಸರು | : | ಯೋಗೇಶ.ಎಸ್.ಟಿ. |
| ತಂದೆಯ ಹೆಸರು | : | ತಿಪ್ಪೇಶಪ್ಪ .ಎಸ್.ಬಿ. |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಪಿ.ಐ. ಕಾಮಾಕ್ಷಿಪಾಳ್ಯ ಸಂಚಾರ ಪೋಲೀಸ್ ಠಾಣೆ |
| ವಾಸಸ್ಥಳ | : | ಬೆಂಗಳೂರು |

ಇಂದು ದಿನಾಂಕಃ 29.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** ಮಾನ್ಯ ಎಪಿಪಿಯವರಿಂದಃ

ನಾನು ದಿಃ 13-12-2013 ರಿಂದ 10-06-2017 ರವರಗೆ ಹಿರೇಕೆರೂರು ವೃತ್ತ ಕಛೇರಿಯಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ದಿನಾಂಕಃ 20.03.2017 ರಂದು ಚಾಸಾ-22 ರವರಿಂದ ಕಡತವನ್ನು ಪಡೆದುಕೊಂಡು ಪರಿಶೀಲಿಸಲಾಗಿ, ತನಿಖೆ ಸಕ್ರಮವಾಗಿರುವುದರಿಂದ, ನಂತರ ನಾನು ರಟ್ಟೀಹಳ್ಳಿ ಪೊಲೀಸ್ ಠಾಣೆಗೆ ಭೇಟಿ ನೀಡಿ ಚಾಸಾ-22 ರವರೊಂದಿಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ನಂತರ ಪೊಲೀಸ್ ಠಾಣೆಯಲ್ಲಿ ಅಪಘಾತಕ್ಕೆ ಸಂಬಂಧಿಸಿದ ಒಂದು ಆಟೋ ರಿಕ್ಷಾ ಮತ್ತು ಒಂದು ದ್ವಿಚಕ್ರ ವಾಹನ ಇರುವುದನ್ನು ತಿಳಿದು, ಚಾಸಾ-2 ಮತ್ತು 5 ರವರನ್ನು ಪಂಚರಾಗಿಸಿಕೊಂಡು, ಸಂಜೆ 6 ರಿಂದ 7 ಗಂಟೆವರೆಗೆ ವಾಹನ ಪಂಚನಾಮೆ ಮಾಡಿರುತ್ತೇನೆ. ಆ ಕಾಲಕ್ಕೆ ಪೋಟೋಗಳನ್ನು ತೆಗೆದಿರುತ್ತೇನೆ. ಸದರಿ ಎರಡು ವಾಹನಗಳನ್ನು ಜಪ್ತುಪಡಿಸಿಕೊಂಡಿರುತ್ತೇವೆ.

2. ಸಾಕ್ಷಿಯು ವಾಹನ ಜಪ್ತುಪಂಚನಾಮೆಯಾದ ನಿಪಿ-22 ರ ಮೇಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ಸಹಿಗಳನ್ನು ನಿಪಿ-22(ಇ) ಮತ್ತು (ಎಫ್) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-23 ರಿಂದ 29 ರಲ್ಲಿರುವ ಪೊಟೋಗಳನ್ನು ನಿಪಿ-22 ರ ಕಾಲಕ್ಕೆ ತೆಗೆದಿರುವುದಾಗಿ ನುಡಿಯುತ್ತಾರೆ. ನಂತರ ಅದೇ ದಿನ ಚಾಸಾ-7 ರಿಂದ 17 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

3. ಅದೇ ದಿನ ಆಟೋ ರಿಕ್ಷಾ ಮಾಲೀಕರಿಗೆ ನೋಟೀಸ್ ಜಾರಿ ಮಾಡಿ, ಉತ್ತರ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸದರಿ 133 ರ ನೋಟೀಸ್ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ನೋಟಿಸ್‌ನ್ನು ನಿಪಿ-51 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-51(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನೋಟೀಸ್‌ಗೆ ನೀಡಿದ ಉತ್ತರ ಪ್ರತಿಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಉತ್ತರದ ಪ್ರತಿಯನ್ನು ನಿಪಿ-52 ಎಂದು ಹಾಗೂ ಸಾಕ್ಷಿಯ ಸಹಿಯ್ನನು ನಿಪಿ-52(ಎ) ಎಂದು ಗುರುತಿಸಲಾಯಿತು.

4. ನಂತರ ಆರೋಪಿ 1 ರವರನ್ನು ದಸ್ತಗಿರಿ ನಿಯಮ ಪಾಲಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಮೋಟಾರ ಸೈಕಲ್ ಮಾಲಕರನ್ನು ಹಾಜರುಪಡಿಸಿಕೊಂಡು ಅವರಿಗೆ ನೋಟೀಸ್ ನೀಡಿರುತ್ತೇನೆ. ಆರೋಪಿ 2 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸದರಿ ನೊಟೀಸ್ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ನೋಟೀಸ್‌ನ್ನು ನಿಪಿ-53 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-53(ಎ) ಎಂದು ಗುರುತಿಸಲಾಯಿತು.

5. ದಿನಾಂಕಃ 21.03.2017 ರಂದು ಪ್ರಕಣದಲ್ಲಿ ಚಾಸಾ-14 ರವರಿಂದ ಕಲಂ 65 ಬಿ ರಡಿಯಲ್ಲಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸದರಿ 65 ಬಿ ಪ್ರಮಾಣ ಪತ್ರದ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರಮಾಣ ಪತ್ರವನ್ನು ನಿಪಿ-54 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-54(ಎ) ಎಂದು ಗುರುತಿಸಲಾಯಿತು. ಅದೇ ದಿನ ಎರಡು ವಾಹನಗಳ ತಪಾಸಣೆ ಮಾಡಿಸಿ, ಚಾಸಾ-15 ರವರಿಂದ ಐ.ಎಮ್.ವಿ. ವರದಿಯಾದ ನಿಪಿ-49 ನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ನಿಪಿ-49 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-49(ಎ) ಎಂದು ಗುರುತಿಸಲಾಯಿತು.

6. ದಿನಾಂಕಃ 22.03.2017 ರಂದು ಮೋಟಾರ್ ಸೈಕಲ್ ಮಾಲೀಕರು ಬಂದು ವಿಮಾ ಪತ್ರ ಇಲ್ಲ, ಹಾಗೂ ಚಾಲನಾ ಪರವಾನಿಗೆ ಇಲ್ಲದ ವ್ಯಕ್ತಿಗೆ ವಾಹನ ಕೊಟ್ಟಿರುತ್ತೇನೆ ಎಂದು ನೋಟೀಸ್‌ಗೆ ಉತ್ತರ ನೀಡಿರುತ್ತಾರೆ. ಸಾಕ್ಷಿಯು ಉತ್ತರ ಪ್ರತಿಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಉತ್ತರ ಪ್ರತಿಯನ್ನು ನಿಪಿ-55 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-55(ಎ) ಎಂದು ಗುರುತಿಸಲಾಯಿತು. 2 ನೇ ಆರೋಪಿಯ ಅಜಾಗರೂಕತೆಯಿಂದ ಅಪಘಾತ ಆಗಿರುವುದು ಕಂಡು ಬಂದಿದ್ದರಿಂದ ದಸ್ತಗಿರಿ ನಿಯಮ ಪಾಲಿಸಿ, ಆರೋಪಿ 2 ರವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

7. ಅದೇ ದಿನ 2 ವಾಹನಗಳ ಮಾಲೀಕರು ಠಾಣೆಗೆ ಹಾಜರಾಗಿ ಇಂಡೆಮ್ನಿಟಿ ಬಾಂಡ್ ಕೊಟ್ಟಿದ್ದು, ವಾಹನಗಳನ್ನು ಬಿಡಗಡೆ ಮಾಡಿರುತ್ತೇವೆ. ಆ ಕಾಲಕ್ಕೆ ಛಾಯಾಚಿತ್ರ ತೆಗೆದಿರುತ್ತೇವೆ. ಸಾಕ್ಷಿಯು ಇಂಡೆಮ್ನಿಟಿ ಬಾಂಡ್‌ಗಳ ಮೇಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ಇಂಡೆಮ್ನಿಟಿ ಬಾಂಡ್‌ಗಳನ್ನು ಕ್ರಮವಾಗಿ ನಿಪಿ-56 ಮತ್ತು 57 ಎಂದು ಹಾಗು ಸಾಕ್ಷಿಯ ಸಹಿಗಳನ್ನು ನಿಪಿ-56(ಎ) ಮತ್ತು 57(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಆಟೋ ರಿಕ್ಷಾ ಬಿಡುಗಡೆ ಕಾಲಕ್ಕೆ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-58 ರಿಂದ 61 ಎಂದು ಗುರುತಿಸಲಾಯಿತು. ಸಾಕ್ಷಿಯು ಮೋಟಾರ್ ಸೈಕಲ್ ಬಿಡುಗಡೆ ಕಾಲಕ್ಕೆ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-62 ಮತ್ತು 63 ಎಂದು ಗುರುತಿಸಲಾಯಿತು.

8. ಅದೇ ದಿನ ಚಾಸಾ-16 ರವರಿಂದ ಪ್ರಕರಣ ಮೃತನ ಪಿ.ಎಮ್. ವರದಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸದರಿ ಪಿ.ಎಮ್. ವರದಿಯಾದ ನಿಪಿ-50 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-50(ಎ) ಎಂದು ಗುರುತಿಸಲಾಯಿತು.

9. ದಿನಾಂಕಃ 23.03.2017 ರಂದು ಚಾಸಾ-1, 6 ಮತ್ತು 7 ರವರ ಪುನರ್ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

10. ದಿನಾಂಕಃ 25.03.2017 ರಂದು ಚಾಸಾ-1, 7 ರಿಂದ 11, 13 ರವರ ಮತ್ತು ಮಕ್ಕಳಾದ ಪ್ರಿಯಾ, ಲಿಖಿತ, ಗಗನರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಗಾಯದ ಪತ್ರಗಳಾದ ನಿಪಿ-37, 39 ರಿಂದ 43, 45 ರಿಂದ 48 ರ ಮೇಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-37(ಎ), 39(ಎ) ರಿಂದ 43(ಎ), 45(ಎ) ರಿಂದ 48(ಎ) ಎಂದು ಗುರುತಿಸಲಾಯಿತು.

11. ದಿನಾಂಕಃ 27.03.2017 ರಂದು ಮೋಟಾರ್ ಸೈಕಲ್ ಮಾಲೀಕರು ಠಾಣೆಗೆ ಹಾಜರಾಗಿ, ನೋಟಿಸ್‌ಗೆ ಉತ್ತರ ನೀಡಿ, ದಂಡ ಕಟ್ಟಿದ್ದು, ರಸೀದಿ ನೀಡಿರುತ್ತೇನೆ. ಸಾಕ್ಷಿಯು ಸದರಿ ರಸೀದಿಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ರಸೀದಿಯನ್ನು ನಿಪಿ-64 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-64(ಎ) ಎಂದು ಗುರುತಿಸಲಾಯಿತು.

12. ದಿನಾಂಕಃ 10.06.2017 ರಂದು ವರ್ಗಾವಣೆಯಾದ ಕಾರಣ ಕಡತವನ್ನು ಚಾಸಾ-24 ರವರಿಗೆ ಹಸ್ತಾಂತರಿಸಿರಿತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿ 1 ಮತ್ತು 2 ರವರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ** 1 ನೇ ಆರೋಪಿ ಪರ ಶ್ರೀ.ವಿ.ವಿ.ಎಮ್. ವಕೀಲರಿಂದಃ

1. ನಾವು ಅಪಘಾತ ಸ್ಥಳಕ್ಕೆ ಭೇಟಿ ನೀಡಿದಾಗ ಸಮಯ ಸಂಜೆ 4 ಗಂಟೆ ಆಗಿತ್ತು. ಘಟನಾ ಸ್ಥಳ ಕುಮದ್ವತಿ ಬ್ರಿಡ್ಜ್‌ನಿಂದ 50-100 ಅಡಿ ದೂರದಲ್ಲಿದೆ. ವಾಹನಗಳು ರಟ್ಟೀಹಳ್ಳಿ ಪೊಲೀಸ್ ಠಾಣಾ ಆವರಣದಲ್ಲಿದ್ದವು. ಪೊಲೀಸ್ ಠಾಣೆಗೆ ಹೋದಾಗ ಸಮಯ 6-30 ರಿಂದ 7 ಗಂಟೆ ಆಗಿತ್ತು. ಸಂಜೆ 7 ಗಂಟೆ ಬೆಳಕು ಇರುತ್ತದೆ ಎಂದರೆ ಸಾಕ್ಷಿಯು ಅದು ಕಾಲಮಾನಕ್ಕೆ ಅವಲಂಬಿತವಾಗಿರುತ್ತದೆ. ಬೆಸಿಗೆ ಕಾಲದಲ್ಲಿ ಸೂರ್ಯಾಸ್ತ 7 ಗಂಟೆ ನಾಂತರ ಆಗುತ್ತದೆ ಎಂದರೆ ಸರಿ. ನಿಪಿ-23 ರಿಂದ 29 ರಲ್ಲಿರುವ ಪೋಟೋಗಳು ಕತ್ತಲಲ್ಲಿ ತೆಗೆದಿರುವಂತವು ಎಂದರೆ ಸರಿ. ಸದರಿ ಪೋಟೋಗಳನ್ನು ಯಾವ ಸ್ಥಳದಲ್ಲಿ ತೆಗೆದಿರುತ್ತೇವೆ ಎಂದು ಹೇಳಲಾಗುವುದಿಲ್ಲ ಎಂದರೆ ಸಾಕ್ಷಿಯು ಪಂಚನಾಮೆಯಲ್ಲಿ ಆ ಬಗ್ಗೆ ನಮೂದಿಸಿರುತ್ತೇವೆ ಎಂದು ನುಡಿಯುತ್ತಾರೆ.

2. ಚಾಸಾ-7 ರಿಂದ 13 ರವರ ಹೇಳಿಕೆ ಪಡೆದುಕೊಂಡಾಗ ಸಮಯ ರಾತ್ರಿ 8 ಗಂಟೆ ಮೇಲಾಗಿತ್ತು. ಸದರಿಯವರ ಹೆಳಿಕೆಗಳನ್ನು ಠಾಣೆಯಲ್ಲಿಯೇ ಪಡೆದುಕೊಂಡಿರುತ್ತೇನೆ. ಚಾಸಾ-7 ರಿಂದ 13 ರಲ್ಲಿ ಸುಮಾರು ಜನ ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿ. ಹೆಣ್ಣು ಮಕ್ಕಳನ್ನು ಸಂಜೆ 6-30 ರ ನಂತರ ಠಾಣೆಗೆ ಕರೆಯಲಾಗುವುದಿಲ್ಲ ಎಂದರೆ ಸಾಕ್ಷಿಯು ಸದರಿಯವರು ಗಾಯಾಳುಗಳಿದ್ದು, ಆಸ್ಪತ್ರೆಯಿಂದ ಸ್ವಯಂ ತಾವೇ ಠಾಣೆಗೆ ಬಂದಿರುತ್ತಾರೆ. ಸದರಿವರಿಗೆ ನೋಟೀಸ್ ಕೊಡಲಾಗುವುದಿಲ್ಲ ಎಂದರೆ ಸಾಕ್ಷಿಯು ನೋಟೀಸ್ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿಯವರು ಕೊಟ್ಟ ಹೇಳಿಕೆಗಳು ನ್ಯಾಯಾಲಯದಲ್ಲಿ ಇಲ್ಲ ಎಂದರೆ ಸಾಕ್ಷಿಯು ಅವರು ವಿವರವಾಗಿ ಹೇಳಿರುವುದಿಲ್ಲ, ಆದರೆ ಪುರಕವಾಗಿ ಹೇಳಿಕೆಗಳನ್ನು ತೆಗೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

3. ಆ ದಿನ ವಾಪಸ್ಸು ಹೆಡ್ ಕಾಟರ್ಸ್‌ಗೆ ಹೋಗಿರುತ್ತೀರಾ ಎಂದರೆ ನನಗೆ ನೆನಪಿಲ್ಲ. 1 ನೇ ಆರೋಪಿಯ ಹೇಳಿಕೆಯನ್ನು ನ್ಯಾಯಾಧೀಶರ ಸಮ್ಮುಖದಲ್ಲಿ ಮಾಡಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಇಲ್ಲ, ಅವರು ಸ್ವ ಇಚ್ಚೆಯಿಂದ ಬಂದರೆ ನ್ಯಾಯಾಲಯದ ಮೂಲಕ ಹೇಳಿಕೆ ಪಡೆದುಕೊಳ್ಳುತ್ತೇವೆ. ಆ ಪ್ರಕಾರ 1 ನೇ ಆರೋಪಿ ನಮಗೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

4. ನಾನು ಮುಖ್ಯ ವಿಚಾಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ತನಿಖಾವಧಿಯಲ್ಲಿ ಅಪಘಾತ 1 ನೇ ಆರೋಪಿಯ ತಪ್ಪಿನಿಂದ ಆಗಿಲ್ಲ ಎಂದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. 2 ನೇ ಆರೋಪಿಯ ತಪ್ಪಿನಿಂದ ಅಪಘಾತ ಆಗಿರುವುದು ಕಂಡು ಬಂದಿದ್ದರೂ ಸಹ 1 ನೇ ಆರೋಪಿಯನ್ನು ಸೇರಿಸಿರುತ್ತೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 2 ನೇ ಆರೋಪಿ ಪರ ಶ್ರೀ.ಜಿ.ಎಸ್.ಎಮ್. ವಕೀಲರಿಂದಃ

1. ದೂರಿನಲ್ಲಿ ಅಪಘಾತದಲ್ಲಿ 2 ನೇ ಆರೋಪಿ ಹಾಗೂ ಮೋಟಾರ್ ಸೈಕಲ್ ಒಳಗೊಂಡಿರುತ್ತದೆ ಎಂಬ ಬಗ್ಗೆ ಎಲ್ಲಿಯೂ ನಮೂದು ಇಲ್ಲ ಎಂದರೆ ಸರಿ. 2 ನೇ ಆರೋಪಿ ಹಾಗೂ ಮೋಟಾರ್ ಸೈಕಲ್ ಒಳಗೊಂಡ ಬಗ್ಗೆ ದಿನಾಂಕಃ 20.03.2017 ರಂದು ಗೊತ್ತಾಗಿರುತ್ತದೆ. ಚಾಸಾ-22 ರವರ ಮೂಲಕ ಸದರಿ ವಿಷಯ ಗೊತ್ತಾಗಿರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಚಾಸಾ-22 ರವರ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಅದೇ ದಿನ 2 ನೇ ಆರೋಪಿ ಸ್ವ ಇಚ್ಛಾ ಹೇಳಿಕೆಯನ್ನು ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ. 2 ನೇ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದವರು ಯಾರು ಎಂದು ನನಗೆ ಗೊತ್ತಿಲ್ಲ, ಹಾಗೂ ಕರೆದುಕೊಂಡು ಬಂದವರ ಹೇಳಿಕೆ ತೆಗೆದುಕೊಂಡಿರುವುದಿಲ್ಲ.

2. ಆರೋಪಿ 2 ರವರ ಹೇಳಿಕೆಯನ್ನು ರಾತ್ರಿ 8 ಗಂಟೆ ಮೇಲೆ ಪಡೆದುಕೊಂಡಿರುತ್ತೇನೆ. ಬೈಕ್‌ನ ಮಾಲೀಕರಿಗೆ ರಾತ್ರಿ ಸುಮಾರು 8-30 ರಿಂದ 9 ಗಂಟೆವರೆಗೆ ನೊಟೀಸ್ ಕೊಟ್ಟಿರುತ್ತೇನೆ. ನೋಟೀಸ್‌ನ್ನು ಠಾಣೆಯಲ್ಲಿ ನಾನೇ ಜಾರಿ ಮಾಡಿರುತ್ತೇನೆ. ಬೈಕ್‌ನ ಮಾಲೀಕರು ಖುದ್ದಾಗಿ ಅವರೇ ಠಾಣೆಗೆ ಬಂದಿರುತ್ತಾರೆ. ಚಾಸಾ-1, 6 ಮತ್ತು 7 ರವರ ಪುನರ್ ಹೇಳಿಕೆಗಳನ್ನು ಯಾವ ಸಮಯಕ್ಕೆ ತೆಗೆದುಕೊಂಡಿರುತ್ತೇನೆ ಎಂದು ನನಗೆ ನೆನಪಿಲ್ಲ. 2 ನೇ ಆರೋಪಿಯ ಗಾರೇಜ್ ಇದೆ ಎಂದರೆ ಸರಿ. 2 ನೇ ಆರೋಪಿ ಒಳ್ಳೆಯ ರೀತಿಯಲ್ಲಿ ಬೈಕ್ ರಿಪೇರಿ ಮಾಡುತ್ತಾರೆ ಎಂದರೆ ಇರಬಹುದು. ರಟ್ಟೀಹಳ್ಳಿ ಪೊಲೀಸರು ಸಾಮಾನ್ಯವಾಗಿ ತಮ್ಮ ಬೈಕ್‌ಗಳನ್ನು ಆರೋಪಿ 2 ರವರ ಹತ್ತಿರ ರಿಪೇರಿ ಮಾಡಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಆರೋಪಿಯು ಯಾವುದೇ ಸ್ವ ಇಚ್ಛಾ ಹೇಳಿಕೆ ಕೊಡದಿದ್ದರೂ ಸಹ ಸುಳ್ಳು ಹೇಳಿಕೆ ಸೃಷ್ಟಿಸಿಕೊಂಡು ಪ್ರಕರಣದಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸುಳ್ಳು ಹೇಳಿಕೆ ಆಧಾರದ ಮೇಲೆ ವಾಹನ ಮಾಲೀಕರಿಗೆ ಖೊಟ್ಟಿ ನೋಟೀಸ್ ನೀಡಿ, ಖೊಟ್ಟಿ ದಾಖಲೆ ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿ 2 ರವರ ಸುಳ್ಳು ಹೇಳಿಕೆ ಆಧಾರದ ಮೇಲೆ ಚಾಸಾ-1, 6, 7 ರವರ ಮರು ಹೇಳಿಕೆ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

3. ಚಾಸಾ-1, 6, 7 ರವರು ಯಾವುದೇ ಮರು ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಠಾಣಾ ಸಿಬ್ಬಂದಿ ಆರೋಪಿಯ ಗಾರೇಜ್ ಮುಂದಿರುವ ಮೋಟಾರ್ ಸೈಕಲ್‌ನ್ನು ಠಾಣೆಗೆ ತಂದು ಪ್ರಕರಣದಲ್ಲಿ ಸೇರಿಸಿರುತ್ತಾರೆ ಎಂದರೆ ಸರಯಲ್ಲ. ನಿಪಿ-10 ಮತ್ತು 11 ರ ಪೋಟೋದಲ್ಲಿ ಬೈಕ್ ಕಾಣಿಸುವುದಿಲ್ಲ ಎಂದರೆ ಸರಿ. ಹಾಗಾಗಿ ಬೈಕ್‌ನ್ನು ಎಲ್ಲಿಂದ ಜಪ್ತುಪಡಿಸಿಕೊಂಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆರೋಪಿ 1 ಮತ್ತು 2 ರವರ ಹೇಳಿಕೆ ಹಾಗೂ ಪಂಚನಾಮೆ ಆಧಾರದ ಮೆಲೆ ಬೈಕ್ ಅಪಘಾತ ಸ್ಥಳದಿಂದ ಜಪ್ತುಪಡಿಸಿಕೊಂಡಿರುತ್ತಾರೆ ಎಂದು ಹೇಳುತ್ತೇನೆ. ಅಪಘಾತ ಸ್ಥಳದಲ್ಲಿ ಬೈಕ್ ಇರುವುದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. 2 ನೇ ಆರೋಪಿಗೂ ಹಾಗೂ ಬೈಕ್‌ಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ಸಮಯದಲ್ಲಿ ಆರೋಪಿ 2 ಮತ್ತು ಮೋಟಾರ್ ಸೈಕಲ್ ಇರಲಿಲ್ಲ ಎಂದರೆ ಸರಿಯಲ್ಲ.

4. ಸದರಿ ಅಪಘಾತ ಚಾಸಾ-1 ರವರ ದೂರಿನಲ್ಲಿ ಹೇಳಿರುವಂತೆ ಆಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ತನಿಖೆಯಲ್ಲಿ ಅಪಘಾತದಲ್ಲಿ 2 ನೇ ಆರೋಪಿ ಒಳಗೊಂಡಿರುವ ಬಗ್ಗೆ ಕಂಡು ಬಂದಿರುತ್ತದೆ ಎಂದು ನುಡಿಯುತ್ತಾರೆ. ಅಪಘಾತದಲ್ಲಿ 2 ನೇ ಆರೋಪಿ ಹಾಗೂ ಮೋಟಾರ್ ಸೈಕಲ್ ಒಳಗೊಂಡಿಲ್ಲದಿದ್ದರೂಸಹ ಸುಳ್ಳು ತನಿಖೆ ಮಾಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೋಟಾರ್ ಸೈಕಲ್ ಮಾಲೀಕರಿಂದ ಒತ್ತಾಯ ಪೂರ್ವಕವಾಗಿ ಸಹಿ ಮಾಡಿಸಿಕೊಂಡು ಆರೋಪಿ 2 ರವರ ವಿರುದ್ಧ ತನಿಖೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,ಸಂಚಾರಿ
ನ್ಯಾಯಪೀಠ ರಟ್ಟೀಹಳ್ಳಿ.